(ಸಾಕ್ಷಿಗೆ ದಿನಾಂಕ: 19.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲುಃ ಶ್ರೀ ಎನ್.ವಿ.ಎನ್. ಎರಡನೇ ಎದುರುದಾರರ ಪರ ವಕೀಲರಿಂದಃ**

ನಾನು ಚಾಲನೆ ಮಾಡುತ್ತಿದ್ದ ಕೆಎ.42.ಇಸಿ.0402 ದ್ವಿಚಕ್ರ ವಾಹನ ನನ್ನ ಬಾಮೈದುನನಾದ ಯೋಗೇಶ್ ರವರ ಹೆಸರಿನಲ್ಲಿರುತ್ತದೆ. ಸದರಿ ವಾಹನದ ವಿಮೆ ಮತ್ತು ಆರ್.ಸಿಯನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ದಾಖಲೆಗಳು ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತೇನೆ. ನನಗೆ ದ್ವಿಚಕ್ರ ವಾಹನ ಚಾಲನೆ ಮಾಡಲು ಪರವಾನಿಗೆ ಇರುತ್ತದೆ. ಈ ಕುರಿತು ದಾಖಲೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಅಪಘಾತದ ಸಮಯದಲ್ಲಿ ಅದು ಕಳೆದು ಹೋಗಿರುತ್ತದೆ ಎಂದು ನುಡಿಯುತ್ತೇನೆ. ಸದರಿ ಪರವಾನಿಗೆಯ ನಕಲನ್ನು ಆರ್.ಟಿ.ಒ ಕಚೇರಿಯಿಂದ ಪಡೆದುಕೊಂಡು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ ಎಂದರೆ ನನಗೆ ಹಾಜರುಪಡಿಸಲು ಆಗುವುದಿಲ್ಲ ಎಂದು ನುಡಿಯುತ್ತೇನೆ.

ನನಗೆ ಬೊಲೆರೋ ಗೂಡ್ಸ್ ವಾಹನ ಡಿಕ್ಕಿಪಡಿಸಿದ್ದರಿಂದ ಅಪಘಾತವಾಗಿರುತ್ತದೆ. ನನಗೆ ಅಪಘಾತಪಡಿಸಿದ ವಾಹನ ನೋಂದಣಿ ಸಂಖ್ಯೆ ಎ.ಪಿ-39-ಟಿ.ಎಫ್-2654 ಆಗಿರುತ್ತದೆ. ನನಗೆ ಎ.ಪಿ-21-ಟಿ.ಎಫ್-3452ನೇ ವಾಹನ ಅಪಘಾತಪಡಿಸಿರುತ್ತದೆ. ಎ.ಪಿ-39-ಟಿ.ಎಫ್-2654ನೇ ವಾಹನ ಅಪಘಾತಪಡಿಸಿರುವುದಿಲ್ಲ ಎಂದರೆ ಸರಿಯಲ್ಲ, ನನಗೆ ಅಪಘಾತಪಡಿಸಿದ ವಾಹನವೇ ಬೇರೆ ಹಾಗೂ ನನ್ನ ಹೆಂಡತಿ ನೀಡಿದ ದೂರಿನಲ್ಲಿ ನಮೂದಿಸಿದ ವಾಹನವೇ ಬೇರೆ ಎಂದರೆ ಸರಿಯಲ್ಲ, ಅಪಘಾತವಾದ ಕೂಡಲೇ ನಾನು ಕುಣಿಗಲ್ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಆಸ್ಪತ್ರೆಯಿಂದ ನಾನು ಎಸಿ ಗಿರಿ ಆಸ್ಪತ್ರೆಗೆ ಹೋಗಿರುತ್ತೇನೆ. ಅಪಘಾತ ಹೇಗೆ ಆಗಿರುತ್ತದೆ ಎಂದು ನಾನು ಸದರಿ ಆಸ್ಪತ್ರೆಗಳಲ್ಲಿ ನನಗೆ ಚಿಕಿತ್ಸೆ ನೀಡಿದ ವೈದ್ಯರಿಗೆ ಅಥವಾ ಪೊಲೀಸರಿಗೆ ಹೇಳಿದ್ದೇನೆಯೇ ಎಂದರೆ ಹೇಳಿರುತ್ತೇನೆ ಎಂದು ನುಡಿಯುತ್ತೇನೆ. ಅಪಘಾತದಿಂದ ಆದ ಗಾಯಗಳಿಗೆ ಚಿಕಿತ್ಸೆಗಾಗಿ ನಾನು ಸುಮಾರು ರೂ.1 ಲಕ್ಷ ಹಣವನ್ನು ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದೂರನ್ನು ನನ್ನ ಹೆಂಡತಿ ಜಯಮ್ಮ ನೀಡಿರುತ್ತಾರೆ. ಅಪಘಾತಪಡಿಸಿದ ವಾಹನವನ್ನು ಬದಲಾಯಿಸಿ ದೂರನ್ನು ಐದು ದಿನಗಳ ನಂತರ ತಡವಾಗಿ ನೀಡಲಾಗಿರುತ್ತದೆ ಎಂದರೆ ಸರಿಯಲ್ಲ, ಅಪಘಾತ ಸಂಭವಿಸಿದಾಗ ನನ್ನ ವಯಸ್ಸು 56 ವರ್ಷವಿತ್ತು ಎಂದರೆ ಸರಿಯಲ್ಲ, ನನಗೆ ಸಂಬಂಧಿಸಿದ ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿಯನ್ನು ನ್ಯಾಯಾಲಯದಲ್ಲಿ

ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ, ಗಾರೆ ಕೆಲಸದಿಂದ ನಾನು ತಿಂಗಳಿಗೆ ರೂ.40 ಸಾವಿರ ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಈ ಕುರಿತು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಲೇಬರ್ ಕಾರ್ಡನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತೇನೆ.

ನಿ.ಪಿ.50 ರಿಂದ 53 ಪಹಣಿಗಳಲ್ಲಿ ಕಾಣಿಸಿದ ಸ್ವತ್ತುಗಳಲ್ಲಿ ಈಗಲೂ ಬೆಳೆ ಬೆಳೆಯುತ್ತಿದ್ದೇನೆ ಎಂದರೆ ಸರಿಯಲ್ಲ, ಕೃಷಿಯಿಂದ ವಾರ್ಷಿಕವಾಗಿ ನನಗೆ ರೂ.3 ಲಕ್ಷ ಆದಾಯ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ನೀಡಿರುವುದಿಲ್ಲ ಎಂದರೆ ಸರಿ. ನಿ.ಪಿ.43 ರಿಂದ 48 ದಾಖಲೆಗಳನ್ನು ಈ ಅರ್ಜಿಗಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ, ನಿ.ಪಿ.43 ರಿಂದ 48 ದಾಖಲೆಗಳನ್ನು ನನಗೆ ಪೂರೈಸಿದವರನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಲು ನನಗೆ ತೊಂದರೆ ಇದೆಯೇ ಎಂದರೆ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತೇನೆ. ಪರಿಹಾರಕ್ಕಾಗಿ ಸುಳ್ಳು ಅರ್ಜಿ ಸಲ್ಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಮೋ.ವಾ.ಅ.ನ್ಯಾಮಂ. 15,
ಕುಣಿಗಲ್.